ಸಾಕ್ಷಿಯನ್ನು ದಿನಾಂಕ 05.06.2025 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.K.R.N. ವಕೀಲರಿಂದ :</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅದರಲ್ಲಿ ನನ್ನ ಸಹಿ ಇರುತ್ತದೆ..

(ಮುಂದುವರಿದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 15.07.2025 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.K.R.N. ವಕೀಲರಿಂದ :**

ನ್ಯಾಯಾಲಯಕ್ಕೆ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು

| | |
|---|---|
| ನಿಪಿ.1 | ನೋಟೀಸು |
| ನಿಪಿ.2 | ಸ.ನಂ.272/2 ರ ಪಹಣಿ |
| ನಿಪಿ.3 | ಸುತ್ತೋಲೆ |
| ನಿಪಿ.4 | ಮರದ ಅಂದಾಜು ಫಸಲು ಮತ್ತು ಅಂದಾಜು ಮರಮುಟ್ಟು ವಿವರ |
| ನಿಪಿ.5 | ದಿನಾಂಕ 15.10.2015 ರ ಸುತ್ತೋಲೆ |
| ನಿಪಿ.6 | ಅಧಿಸೂಚನೆ |
| ನಿಪಿ.7 | ಸೆಂಟ್ರಲ್ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ ನಲ್ಲಿ ದಿಃ 09.07.2018 ರಂದು ಅರ್ಜಿ ಸಂ.215/ಟಿಟಿ / 2016 ರಲ್ಲಿ ಮಾಡಿರುವ ಆದೇಶದ ದೃಢೀಕೃತನಕಲು |
| ನಿಪಿ.8 | ಸಿವಿಲ್ ಮಿಸ್ ಸಂ.5001/2016 ರಲ್ಲಿ ಮಾಡಿರುವ ಆದೇಶ ಮತ್ತು ಅವಾರ್ಡ್ ನ ದೃಢೀಕೃತ ನಕಲು |
| ನಿಪಿ.9 | ಸಿವಿಲ್ ಮಿಸ್ ಸಂ.5001/2016 ರಲ್ಲಿನ ಆದೇಶಪುಟದ ದೃಢೀಕೃತ ನಕಲು |
| ನಿಪಿ.10 | ದೂರದ ದೃಢೀಕರಣ ಪತ್ರ |

ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 17.03.2026 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಎದುರುದಾರರ ಪರ ಶ್ರೀ.H.S.M.ವಕೀಲರಿಂದ :**

2015-16 ನೇ ಸಾಲಿನಲ್ಲಿ ವಿದ್ಯುತ್ ಲೈನನ್ನು ನಮ್ಮ ಜಮೀನಿನ ಮೇಲೆ ಎಳೆದಿರುತ್ತಾರೆ. ಆ ಸಂದರ್ಭದಲ್ಲಿ ನನಗೆ ನೋಟೀಸನ್ನು ನೀಡಿ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಎದುರುದಾರರು ಪೊಲೀಸರನ್ನು ಕರೆದುಕೊಂಡು ಬಂದು ನಿನಗೆ ಹಣ ಕೊಡುತ್ತೇನೆ ಎಂದು ಹೇಳಿ ನಿಪಿ.1 ನ್ನು ನನಗೆ ಕೊಟ್ಟಿರುತ್ತಾರೆ. ಎದುರುದಾರರು ನನಗೆ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ನನಗೆ ಗೊತ್ತು. ನನ್ನ ಜಮೀನಿನಲ್ಲಿ 4 ತೆಂಗಿನ ಮರಗಳನ್ನು ಕಟಾವು ಮಾಡಿರುತ್ತಾರೆ. ತೆಂಗಿನ ಮರಗಳಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ದಾಖಲಾತಿಯನ್ನು ನೀಡಿರುವುದಿಲ್ಲ.

ಎದುರುದಾರರು ಜಿಲ್ಲಾಧಿಕಾರಿಗಳ ಆದೇಶದಂತೆ ಸೂಕ್ತವಾಗಿ ಪರಿಹಾರವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಸುಮಾರು 400 ಅಡಿಕೆ ಮರಗಳನ್ನು ಕಟಾವು ಮಾಡಿರುತ್ತಾರೆ. ತೆಂಗಿನ ಮರಗಳಿಂದ ಬರುತ್ತಿದ್ದ ಆದಾಯದ ಬಗ್ಗೆ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಬಾಳೇಗಿಡದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲಾತಿಯನ್ನು ನೀಡಿಲ್ಲ ಎಂದರೆ ಸರಿ. ಮಾವಿನ ಮರದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲಾತಿಯನ್ನು ನೀಡಿಲ್ಲ ಎಂದರೆ ಸರಿ. ಆದ್ದರಿಂದ, ಎದುರುದಾರರು ಸೂಕ್ತವಾದ ಪರಿಹಾರವನ್ನು ಮಾವಿನ ಮರಗಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನಿಂಬೇಗಿಡದಿಂದ ಬರುತ್ತಿದ್ದ ಆದಾಯದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನೀಡಿಲ್ಲ ಎಂದರೆ ಸರಿ. ನುಗ್ಗೇಮರದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲಾತಿಯನ್ನು ನೀಡಿಲ್ಲ ಎಂದರೆ ಸರಿ. ಎದುರುದಾರರು ಕರಿಬೇವಿನ ಸಸಿಗಳನ್ನು ಕಟಾವು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಕರಿಬೇವಿನ ಸಸಿಗಳನ್ನು ಕಟಾವು ಮಾಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಬೇವಿನ ಮರದಿಂದ ರೂ.20,000 ನಷ್ಟ ಉಂಟಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಬೋರ್ ವೆಲ್ ನ್ನು ಕೊರೆಸಿರುವ ಬಗ್ಗೆ ಬಿಲ್ಲು ಇರುವುದಿಲ್ಲ. ಎದುರುದಾರರು ನೀಡಿರುವ ಪರಿಹಾರ ಸೂಕ್ತವಾಗಿದ್ದು ಹೆಚ್ಚಿನ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ರೂ.31,40,974 ಪರಿಹಾರದ ಮೊತ್ತವನ್ನು ನೀಡಿರುತ್ತಾರೆ ಎಂದರೆ ಸರಿ.

ನಿಪಿ.3 ಮತ್ತು 4 ನನ್ನ ಜಮೀನಿಗೆ ಸಂಬಂಧಪಟ್ಟ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ. ನಿಪಿ.8 ಮತ್ತು 9 ಯಾವ ಜಮೀನಿಗೆ ಸಂಬಂಧಪಟ್ಟಿದ್ದು ಮತ್ತು ಯಾವ ಗ್ರಾಮದ್ದು ಎಂದು ನನಗೆ ಗೊತ್ತಿಲ್ಲ. ನಿಪಿ.8 ಮತ್ತು 9 ನಮ್ಮ ಜಮೀನಿಗೆ ಸಂಬಂಧಪಟ್ಟ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ಎಲ್ಲಾ ದಾಖಲಾತಿಗಳನ್ನು ಒದಗಿಸಿಲ್ಲವಾದ್ದರಿಂದ ತಡವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಎದುರುದಾರರು ನನಗೆ 2016 ರಲ್ಲಿ ಸಂಪೂರ್ಣ ಪರಿಹಾರದ ಮೊತ್ತವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ.

ಸ.ನಂ.272/2 ರಲ್ಲಿ ನಾನೇ ಸ್ವಾಧೀನದಲ್ಲಿ ಇರುತ್ತೇನೆ. ಎದುರುದಾರರು ಭೂಸ್ವಾಧೀನಮಾಡಿಕೊಂಡಿಲ್ಲವಾದ್ದರಿಂದ ಜಮೀನಿಗೆ ನಾನು ಕೇಳಿರುವ ಪರಿಹಾರ

ನೀಡಲು ಬಾದಸ್ದರಲ್ಲ ಎಂದರೆ ಸರಿಯಲ್ಲ. ಅರ್ಜಿಯನ್ನು ನಾನು ತಡವಾಗಿ ಸಲ್ಲಿಸಿರುವುದರಿಂದ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ